# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 29 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಪಿ.ಆರ್ ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 29.01.2021 |
| ಉತ್ತರಿಸುವವರು | : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಹಿರಿಯ ನಾಗರೀಕರ ಮತ್ತು ತಂದೆ ತಾಯಿಯವರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007ರ ಅನ್ವಯ ವೃದ್ಧಾಶ್ರಮಗಳ ನಿರ್ವಹಣೆಗೆ ಯಾವುದಾದರೂ ಕಾರ್ಯ ಯೋಜನೆ ರೂಪಿಸಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | • ರಾಜ್ಯದಲ್ಲಿರುವ ಪೋಷಕರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ರಕ್ಷಣಾ ಕಾಯ್ದೆ-2007ರ ಅನ್ವಯ ವೃದ್ಧಾಶ್ರಮಗಳ ನಿರ್ವಹಣೆಗೆ ರಾಜ್ಯ ಸರ್ಕಾರದಿಂದ 2013-14ನೇ ಸಾಲಿನಲ್ಲಿ ಆದೇಶ ಸಂಖ್ಯೆ: ಮಮಇ/264/ಪಿಹೆಚ್‌ಪಿ/2013, ದಿನಾಂಕ:28-08-2013ರಲ್ಲಿ ಮಾರ್ಗಸೂಚಿಯನ್ನು ರೂಪಿಸಿ ಜಾರಿಗೊಳಿಸಲಾಗಿರುತ್ತದೆ.<br>• ಪ್ರಸ್ತುತ ಈ ಮೇಲಿನ ಮಾರ್ಗಸೂಚಿಯನುಸಾರ ವೃದ್ಧಾಶ್ರಮಗಳನ್ನು ನಿರ್ವಹಿಸಲಾಗುತ್ತಿದೆ. (ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ). |
| ಆ) | ರಾಜ್ಯದಲ್ಲಿರುವ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು; ಖಾಸಗಿ, ಸರ್ಕಾರಿ ಮತ್ತು ಸರ್ಕಾರ ಅನುದಾನಿತ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 277 ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ 194 ಖಾಸಗಿ ವೃದ್ಧಾಶ್ರಮಗಳು, ರಾಜ್ಯ ಸರ್ಕಾರದ ಅನುದಾನದಡಿ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಿಲ್ಲೆಗಳಲ್ಲಿ 30 ವೃದ್ಧಾಶ್ರಮಗಳು ಮತ್ತು ಉಪ ವಿಭಾಗಗಳಲ್ಲಿ 08 ವೃದ್ಧಾಶ್ರಮಗಳು ಹಾಗೂ ಕೇಂದ್ರ ಸರ್ಕಾರದ ಅನುದಾನದಡಿ 45 ವೃದ್ಧಾಶ್ರಮಗಳು ಇರುತ್ತವೆ. (ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ) |
| ಇ) | ಸದರಿ ವೃದ್ಧಾಶ್ರಮಗಳ ಅಸಲಿ ಸ್ಥಿತಿಗತಿಗಳ ಕುರಿತು ವಾರ್ಷಿಕವಾರು 3rd party ಅಥವಾ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯ ವತಿಯಿಂದ ಅಧ್ಯಯನ/ ತಪಾಸಣೆ ನಡೆಸುವ ಕಾರ್ಯಕ್ರಮಗಳ ರೂಪಿಸಲ್ಪಟ್ಟಿವೆಯೇ; (ವಿವರ ನೀಡುವುದು) | • ಸದರಿ ವೃದ್ಧಾಶ್ರಮಗಳ ಅಸಲಿ ಸ್ಥಿತಿಗತಿಗಳ ಕುರಿತು ವಾರ್ಷಿಕವಾರು 3rd party ಅಥವಾ ಸರ್ಕಾರೇತರ ಸ್ವಯಂ ಸಂಸ್ಥೆಯ ವತಿಯಿಂದ ಅಧ್ಯಯನ/ ತಪಾಸಣೆ ನಡೆಸಿರುವುದಿಲ್ಲ. ಆದರೆ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು, ಆಗಾಗ್ಗೆ ವೃದ್ಧಾಶ್ರಮಗಳಿಗೆ ಭೇಟಿ ನೀಡಿ ವೃದ್ಧಾಶ್ರಮಗಳ ನಿರ್ವಹಣೆ ಬಗ್ಗೆ ತಪಾಸಣೆ ನಡೆಸಿ ಸಲಹೆ/ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.<br>• ಪೋಷಕರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ರಕ್ಷಣಾ ಕಾಯ್ದೆ-2007ರ ಅನ್ವಯ ಜಿಲ್ಲಾ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮಿತಿಯಲ್ಲಿ ಆಯಾ ಜಿಲ್ಲೆಗಳ ವೃದ್ಧಾಶ್ರಮಗಳ ನಿರ್ವಹಣೆ ಮತ್ತು ಸುಧಾರಣೆಯ ಬಗ್ಗೆ ಚರ್ಚಿಸಿ ಕ್ರಮಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | • ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಅಧಿಕಾರಿಗಳ ತಂಡವು ಪ್ರತಿ ವರ್ಷ ರಾಜ್ಯಕ್ಕೆ ಭೇಟಿ ನೀಡಿ ಹಿರಿಯ ನಾಗರಿಕರ ಸಮಗ್ರ ಕಾರ್ಯಕ್ರಮ (IPOP) ಯಡಿಯಲ್ಲಿನ ವೃದ್ಧಾಶ್ರಮಗಳ ನಿರ್ವಹಣೆಯ ಬಗ್ಗೆ ತಪಾಸಣೆ ನಡೆಸಿ ಸಲಹೆ/ ಮಾರ್ಗದರ್ಶನವನ್ನು ಸಹ ನೀಡುತ್ತಿದ್ದಾರೆ. |
| ಈ) | ಹಿರಿಯ ನಾಗರಿಕರ ಮತ್ತು ತಂದೆ ತಾಯಿಯವರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007ರ ಅನುಚ್ಛೇದ 19ರ ಅನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೃದ್ಧಾಶ್ರಮಗಳನ್ನು ಸ್ಥಾಪಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು) | ಹಿರಿಯ ನಾಗರಿಕರ ಮತ್ತು ತಂದೆ ತಾಯಿಯವರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007ರ ಅನ್ವಯ ರಾಜ್ಯ/ ಕೇಂದ್ರ ಸರ್ಕಾರದ ಅನುದಾನದಡಿ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಎಲ್ಲಾ ಜಿಲ್ಲೆಗಳಲ್ಲಿ ವೃದ್ಧಾಶ್ರಮಗಳನ್ನು ಸ್ಥಾಪಿಸಲಾಗಿದೆ. |

**ಸಂಖ್ಯೆ: ಮಮಇ 21 ಪಿಹೆಚ್‌ಪಿ 2021**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

# ಅನುಬಂಧ-1

## ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಮಾಹಿತಿ

| ಕ್ರಸಂ. | ಜಿಲ್ಲೆಯ ಹೆಸರು | | ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ) |
|---|---|---|---|
| 1 | ಬೆಂಗಳೂರು ನಗರ | 1 | ತುಂಗಭದ್ರ ವಿದ್ಯಾ ಸಂಸ್ಥೆ, (ರಿ) ನಂ 113, 2ನೇ ಕ್ರಾಸ್, 2ನೇ ಹಂತ ಮಹಾಲಕ್ಷ್ಮಿಪುರಂ, ಬೆಂಗಳೂರು-17 |
| | | 2 | ಚೆಶ್ಶೈರ್ ಹೋಮ್ ಇಂಡಿಯಾ (ರಿ), ನಂ. 408, ಇಸಿಸಿ ರೋಡ್, ವಿಮಾನ ನಿಲ್ದಾಣ ರಸ್ತೆ ಮಣಿಪಾಲ ಆಸ್ಪತ್ರೆ ಎದುರು ಬೆಂಗಳೂರು-17 |
| 2 | ಬಳ್ಳಾರಿ | | ಎಡಯೂರು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠ, ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ |
| 3 | ಬೆಳಗಾವಿ | | ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ-590010, ಬೆಳಗಾಂ |
| 4 | ಬೀದರ್ | | ರಮಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಔರಾದ್ .ಬಿ, ಬೀದರ್ |
| 5 | ಬಾಗಲಕೋಟೆ | | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ವೃದ್ಧಾಶ್ರಮ, ಬೀಳಗಿ ಬಾಗಲಕೋಟೆ |
| 6 | ವಿಜಯಪುರ | | ಶ್ರೀ ಸಿದ್ಧೇಶ್ವರ ವಿದ್ಯಾಪೀಠ, (ರಿ) ತಾಳಿಕೋಟೆ, ಗುರುಪಾದೇಶ್ವರ ನಗರ, ಬಸವನ ಬಾಗೇವಾಡಿ ರೋಡ್, ಬಿಜಾಪುರ |
| 7 | ಚಿಕ್ಕಬಳ್ಳಾಪುರ | | ಚೈತನ್ಯ ವೃದ್ಧಾಶ್ರಮ, ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಃಶ್ಚೇತನ ಸಂಸ್ಥೆ, ಕೈವಾರ, ಚಿಂತಾಮಣಿ ತಾ॥ ಚಿಕ್ಕಬಳ್ಳಾಪುರ |
| 8 | ಚಿಕ್ಕಮಗಳೂರು | | ರೋಟರಿ ಅಂಡ್ ಇನ್ನರ್ ವ್ಹೀಲ್ ಟ್ರಸ್ಟ, ಜೀವನಸಂಧ್ಯಾ ವೃದ್ಧಾಶ್ರಮ ಕದ್ರಿಮಿದ್ರಿ, ಮುಕ್ತಿಹಳ್ಳಿ ಅಂಚೆ, ಚಿಕ್ಕಮಗಳೂರು |
| 9 | ಚಿತ್ರದುರ್ಗ | | ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ |
| 10 | ಧಾರವಾಡ | | ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, (ರಿ), ಎಸ್.ಜಿ. ಜಿಗಳೂರ ಬಿಲ್ಡಿಂಗ್, ಬಂಕಾಪುರ ಚೌಕ್, ಪಿ.ಬಿ ರೋಡ್, ಹುಬ್ಬಳ್ಳಿ ಅಂಡ್ ಬಿದ್ನಾಳ ಕ್ರಾಸ್, ಶಕ್ತಿನಗರ, ಹುಬ್ಬಳ್ಳಿ |
| 11 | ಗದಗ | | ಜಿ.ಎಫ್ ಉಪನಾಳ ಪ್ರತಿಷ್ಠಾನ ಬೆಂಗಳೂರು ಶಾಖೆ: ಲಕ್ಷ್ಮೇಶ್ವರ ಶಾಂತಿಧಾಮ ವೃದ್ಧಾಶ್ರಮ, ಮುಕ್ತಿಮಂದಿರ ರೋಡ್ ಲಕ್ಷ್ಮೀಶ್ವರ |
| 12 | ಗುಲ್ಬರ್ಗಾ | | ಮಹಾದೇವಿ ತಾಯಿ ಮಹಿಳಾ ವಿದ್ಯಾವರ್ಧಕ ಸಂಘ, ಕಲಬುರಗಿ |
| 13 | ಹಾಸನ | | ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನ ಹಳ್ಳಿ, ಹಾಸನ ತಾ॥ |
| 14 | ಹಾವೇರಿ | | ಶ್ರೀ ಶಕ್ತಿ ಅಸೋಸಿಯೇಷನ್, ಗುತ್ತೂರು ಕಾಲೋನಿ, ಹರಿಹರ, ದಾವಣಗೆರೆ ಜಿಲ್ಲೆ ಇವರ ವತಿಯಿಂದ ನಾಗೇಂದ್ರ ಮಟ್ಟಿ ರೈಲ್ವೆ ಸ್ಟೇಷನ್ ಹತ್ತಿರ, ಹಾವೇರಿ. |
| 15 | ಕೋಲಾರ | | ದಿವ್ಯಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, (ರಿ), ಅರಿಶಿಣಕುಂಟೆ, ಮಾಣಿಗಾನ ಹಳ್ಳಿ ಅಂಚೆ ಶ್ರೀನಿವಾಸಪುರ ತಾ॥ ಕೋಲಾರ |
| 16 | ಕೊಪ್ಪಳ | | ವಿದ್ಯಾನಂದ ಗುರುಕುಲ ವೃದ್ಧಾಶ್ರಮ, ಶಿಕ್ಷಣ ವಿಶ್ವಸ್ಥ ಮಂಡಲ, ಕೂಕನೂರು, ಕೊಪ್ಪಳ |
| 17 | ಮಂಡ್ಯ | | ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ, ಭಾಷ್ ನಗರ, ಮಂಡ್ಯ |
| 18 | ರಾಮನಗರ | | ಶಾಂತಲಾ ಚಾರಿಟಬಲ್ ಟ್ರಸ್ಟ್, ರಾಮನಗರ ಸಂಸ್ಥೆ ವತಿಯಿಂದ ವಾರ್ಡ್ ಸಂ. 31, ಅರ್ಚಕರ ಹಳ್ಳಿ, ಬಿ.ಎಂ. ರಸ್ತೆಯಲ್ಲಿ ನಡೆಸುತ್ತಿರುವ ದಾರಿದೀಪ ವೃದ್ಧಾಶ್ರಮ |
| 19 | ಶಿವಮೊಗ್ಗ | | ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ |
| 20 | ತುಮಕೂರು | | ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್, (ರಿ), ಶ್ರೀ ಸಾಯಿ ವೃದ್ಧಾಶ್ರಮ, ಕಣಿವೇನಹಳ್ಳಿಗೇಟ್, ಪಾವಗಡ ತಾ॥ ತುಮಕೂರು ಜಿಲ್ಲೆ |
| 21 | ಕೊಡಗು | | ಶ್ರೀ ಶಕ್ತಿ ಅಸೋಸಿಯೇಷನ್ (ರಿ), ಚರ್ಚ್‌ರಸ್ತೆ, ಕೂಡಿಗೆ, ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು, ಕೊಡಗು |
| 22 | ಯಾದಗಿರಿ | | ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ |
| 23 | ಚಾಮರಾಜನಗರ | | ಜ್ಞಾನಸಿಂಧು ವೃದ್ಧಾಶ್ರಮ, ಜ್ಞಾನಸಿಂಧು ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಸಂತೇಮರಹಳ್ಳಿ, ಚಾಮರಾಜನಗರ |
| 24 | ದಕ್ಷಿಣ ಕನ್ನಡ | | ಅಭಯ ಆಶ್ರಯ, (ರಿ) ಅಸೈಗೋಳಿ, ಕೊಣಾಜಿ, ಮಂಗಳೂರು |
| 25 | ಮೈಸೂರು | | ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ, (ಜೆಎಸ್‌ಎಸ್) ನಂ. 915, 5ನೇ ಮೈನ್, ಅರವಿಂದ ನಗರ ರಾಮಾನುಜ ರಸ್ತೆ, ಮೈಸೂರು-570004 |

ಷರಾ: ಉತ್ತರ ಕನ್ನಡ, ಉಡುಪಿ, ದಾವಣಗೆರೆ, ರಾಯಚೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ವೃದ್ಧಾಶ್ರಮಗಳು ನಡೆಯುತ್ತಿಲ್ಲ.

# ಅನುಬಂಧ-2

## ರಾಜ್ಯದಲ್ಲಿರುವ ವೃದ್ಧಾಶ್ರಮಗಳ ಮಾಹಿತಿ

| ಕ್ರಸಂ | ಜಿಲ್ಲೆಯ ಹೆಸರು | ಖಾಸಗಿ ವೃದ್ಧಾಶ್ರಮಗಳು | ರಾಜ್ಯ ಸರ್ಕಾರದ ಅನುದಾನಿತ ವೃದ್ಧಾಶ್ರಮಗಳು | ಕಂದಾಯ ಉಪ ವಿಭಾಗದಲ್ಲಿನ ವೃದ್ಧಾಶ್ರಮಗಳು | ಕೇಂದ್ರ ಸರ್ಕಾರದ ಅನುದಾನಿತ ವೃದ್ಧಾಶ್ರಮಗಳು | ಷರಾ ಉಪ ವಿಭಾಗಗಳ ವಿವರ |
|---|---|---|---|---|---|---|
| 1 | ಬೆಂಗಳೂರು ನಗರ | 89 | 2 | 0 | 3 | – |
| 2 | ಬೆಂಗಳೂರು ಗ್ರಾ | 4 | 0 | 0 | 1 | – |
| 3 | ಬೆಳಗಾವಿ | 4 | 1 | 0 | 1 | – |
| 4 | ಬಳ್ಳಾರಿ | 2 | 1 | 0 | 2 | – |
| 5 | ಬೀದರ್ | 1 | 1 | 1 | 2 | ಬೀದರ್ ಉಪ ವಿಭಾಗ |
| 6 | ವಿಜಯಪುರ | 1 | 1 | 0 | 1 | – |
| 7 | ಬಾಗಲಕೋಟೆ | 2 | 1 | 0 | 1 | – |
| 8 | ಚಿತ್ರದುರ್ಗ | 3 | 1 | 0 | 2 | – |
| 9 | ಚಿಕ್ಕಮಗಳೂರು | 0 | 1 | 0 | 2 | – |
| 10 | ಚಾಮರಾಜನಗರ | 1 | 1 | 0 | 1 | – |
| 11 | ಧಾರವಾಡ | 5 | 1 | 0 | 2 | – |
| 12 | ದಕ್ಷಿಣ ಕನ್ನಡ | 20 | 1 | 0 | 0 | – |
| 13 | ದಾವಣಗೆರೆ | 4 | 1 | 0 | 4 | – |
| 14 | ಕಲಬುರಗಿ | 0 | 1 | 0 | 1 | – |
| 15 | ಗದಗ | 2 | 1 | 0 | 1 | – |
| 16 | ಹಾವೇರಿ | 1 | 1 | 0 | 1 | – |
| 17 | ಹಾಸನ | 3 | 1 | 2 | 1 | ಹಾಸನ ಮತ್ತು ಸಕಲೇಶಪುರ ಉಪ ವಿಭಾಗ |
| 18 | ಕೊಡಗು | 1 | 1 | 0 | 1 | – |
| 19 | ಕೋಲಾರ | 3 | 1 | 0 | 1 | – |
| 20 | ಕೊಪ್ಪಳ | 0 | 1 | 0 | 1 | – |
| 21 | ಮೈಸೂರು | 14 | 1 | 2 | 0 | ಮೈಸೂರು ಮತ್ತು ಹುಣಸೂರು ಉಪ ವಿಭಾಗ |
| 22 | ಮಂಡ್ಯ | 3 | 1 | 0 | 2 | – |
| 23 | ರಾಯಚೂರು | 0 | 1 | 0 | 1 | – |
| 24 | ಶಿವಮೊಗ್ಗ | 3 | 1 | 2 | 3 | ಶಿವಮೊಗ್ಗ ಮತ್ತು ಸಾಗರ ಉಪ ವಿಭಾಗ |
| 25 | ತುಮಕೂರು | 3 | 1 | 1 | 3 | ತುಮಕೂರು ಉಪ ವಿಭಾಗ |
| 26 | ಉತ್ತರ ಕನ್ನಡ | 0 | 1 | 0 | 1 | |
| 27 | ಉಡುಪಿ | 18 | 1 | 0 | 0 | |
| 28 | ರಾಮನಗರ | 1 | 1 | 0 | 1 | |
| 29 | ಚಿಕ್ಕಬಳ್ಳಾಪುರ | 6 | 1 | 0 | 2 | |
| 30 | ಯಾದಗಿರಿ | 0 | 1 | 0 | 3 | |
| | | 194 | 30 | 08 | 45 | |
| ರಾಜ್ಯದಲ್ಲಿನ ಒಟ್ಟು ವೃದ್ಧಾಶ್ರಮಗಳು | | 277 | | | | |